

(6ನೇ ಪುಟ ನೋಡಿ)

ಆ ಕಾಲ್ದಾರಿಯಲ್ಲಿ ಹೋಗುವಾಗ ಅಕ್ಕ ಪಕ್ಕದಲ್ಲಿ ತರತರದ ಬಣ್ಣದ ಗಿಡಗಳಿವೆ! ಸಾಲು ಸಾಲು ಅಡಿಕೆ ಮರಗಳನ್ನು ನೋಡುತ್ತಾ ಸಾಗುತ್ತಿದ್ದಂತೆಯೇ ಭೋರ್ಗರೆಯುವ ಜಲಪಾತದ ಸದ್ದು ಕೇಳಿಸುತ್ತದೆ. ಇಲ್ಲೇ ಹತ್ತಿರಲದಲ್ಲಿ ಜಲಧಾರೆ ಇರಬಹುದು ಎಂದು ಅನ್ನಿಸುವುದು ನಿಜ. ಆದರೆ ಜಲಪಾತವೇನೂ ಅಲ್ಲಿಂದ ನೋಡಲು ಸಿಗುವುದಿಲ್ಲ.

ಅಡಿಕೆ ತೋಟದ ಆ ಕಾಲು ದಾರಿಯಲ್ಲಿಯೇ ಸಾಗಿದಾಗ, ಕೃಷಿಕರೊಬ್ಬರಿಗೆ ಸೇರಿದ ಮನೆ ಎದುರಾಗುತ್ತದೆ. ಅವರ ಪುಟ್ಟ ಅಂಗಳವನ್ನು ದಾಟಿ, ಅನತಿ ದೂರ ಹೆಜ್ಜೆ ಹಾಕಿದರೆ ತಳಕೆಬೈಲ್ ಅಂಬಾಳ ಎಂಬ ಪುಟ್ಟ ಹಳ್ಳ ಸಿಗುತ್ತದೆ. ಈ ಹಳ್ಳವೇ ಜಲಧಾರೆಯಾಗಿ ಮೂರು ಹಂತದಲ್ಲಿ ಧುಮುಕುತ್ತವೆ. ಈ ಜಲಪಾತವನ್ನು ಅಲ್ಲಿನ ಅಡಿಕೆ ತೋಟ; ದಿಂಬದ ಮೇಲಿಂದ ನಿಂತು ವೀಕ್ಷಿಸಬಹುದು. ತುಸು ಪ್ರಯಾಸಪಟ್ಟು ಕೆಳಗಿಳಿದರೆ ಹಾಲ್ನೊರೆಯಾಗಿ, ವಿಶಾಲವಾಗಿ ಹರಡಿ ಭೋರ್ಗರೆಯುತ್ತಿರುವ ಈ ಜಲಧಾರೆಯ ವೈಭವ, ಸೊಬಗನ್ನು ಅತಿ ಸಮೀಪದಿಂದ ಆಸ್ವಾದಿಸಿ ಕಣ್ತುಂಬಿಕೊಳ್ಳಬಹುದು.

ಸುಮಾರು 50 ಅಡಿ ಎತ್ತರದಿಂದ ಧುಮುಕುವ ಈ ಅಜ್ಜಿಗುಂಡಿ ಜಲಪಾತವು ನಿಸರ್ಗದ ಮಧ್ಯೆ ಅವಿತುಕೊಂಡಿದೆ. ಇಲ್ಲಿ 'ಅಜ್ಜಿಗುಂಡಿ ಡಾಟ್ ಕಾಮ್' ಎಂಬ ನಾಟಕ ಪ್ರದರ್ಶನಗೊಂಡು, ಲಿಮ್ಕಾ ದಾಖಲೆ ಆಗಿರುವುದು ಈ ಜಲಪಾತದ ಹೆಗ್ಗಳಿಕೆ. ಒಂದೆಡೆಗೆ ಅಡಿಕೆ ತೋಟದ ಸೊಬಗು, ಮತ್ತೊಂದೆಡೆ ಹಸಿರಿನಿಂದ ಕಂಗೊಳಿಸುವ ಪ್ರಕೃತಿಯ ಸೌಂದರ್ಯ ಇವೆರಡರ ಮಧ್ಯೆ ಶುಭ್ರವಾಗಿ ಹರಿಯುತ್ತಿದೆ ಜಲಧಾರೆ.

